**ಸಾಕ್ಷಿಯನ್ನು ದಿನಾಂಕ 03-06-2025 ರಂದು ಪುನಃ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ಪರ ಶ್ರೀ ಸಿ.ಎಸ್.ಪಿ. ವಕೀಲರಿಂದಃ**

6. ನಾನು, ಪ್ರಾಸಾ-1 ಮತ್ತು 2 ರವರು ಈ ಪ್ರಕರಣದ 1 ರಿಂದ 5 ನೇ ಆರೋಪಿಗಳ ಮೇಲೆ ಹಲ್ಲೆ ಮಾಡಿ ಅವರ ಜಾತಿ ನಿಂದನೆ ಮಾಡಿದ ಬಗ್ಗೆ ಇದೇ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ದಿನಾಂಕ 18-07-2022 ರಂದು ನಾನು, ಪ್ರಾಸಾ-1 ಮತ್ತು 2 ರವರು ಈ ಪ್ರಕರಣದ 1 ರಿಂದ 5 ನೇ ಆರೋಪಿಗಳ ಮೇಲೆ ಹಲ್ಲೆ ಮಾಡಿ ಅವರ ಜಾತಿ ನಿಂದನೆ ಮಾಡಿರುತ್ತೇವೆ ಎಂದು ಸದರಿ ಪ್ರಕರಣದಲ್ಲಿ ಅಪಾದನೆ ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ದಿನಾಂಕ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ.

7. ನನ್ನನ್ನು ತನಿಖಾಧಿಕಾರಿ ವಿಚಾರಣೆ ಮಾಡಿ ಹೇಳಿಕೆ ಪಡೆದ ದಿನಾಂಕ ನನಗೆ ಈಗ ನೆನಪಿಲ್ಲ. ಘಟನೆ ಆದ ಎರಡು ದಿನಗಳ ನಂತರ ನನ್ನ ಹೇಳಿಕೆಯನ್ನು ಪಡೆಯಲಾಗಿತ್ತು. ಸದರಿ ಹೇಳಿಕೆ ನೀಡಿದ ನಂತರ ನಾನು ಪುನಃ ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ನಾಕಲಗೂಡು ಗ್ರಾಮದ ಸರ್ವೆ ನಂಬರ್ 38/1 ರಲ್ಲಿ 15 ಸೆಂಟ್ಸ್ ಜಾಗ ಸರ್ಕಾರಕ್ಕೆ ಸೇರಿದ್ದು, ಅದಕ್ಕೆ ನಾನು ಬೇಲಿ ಹಾಕಿಕೊಂಡಿದ್ದೆ. ಸದರಿ ಜಾಗದ ಕುರಿತಾಗಿ ನನ್ನ ಮಗ ಫಾರಂ ನಂಬರ್ 57 ನ್ನು ಸಲ್ಲಿಸಿರುತ್ತಾನೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ. ಸದರಿ ಜಾಗದಲ್ಲಿ ಮನೆ ಕಟ್ಟಲು ನೀವಾಗಲೀ, ನಿಮ್ಮ ಮಗನಾಗಲೀ ಪಂಚಾಯ್ತಿಯಿಂದ ಅನುಮತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ನನ್ನ ಮಗ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆ ಪ್ರಕಾರ ಅನುಮತಿ ಪಡೆದ ಬಗ್ಗೆ ದಾಖಲೆಯನ್ನು ನಾನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ. ನನ್ನ ಮಗ ಮನೆ ಕಟ್ಟಲು ಹಣವನ್ನು ನನ್ನ ಕೈಯಲ್ಲಿ

ಕೊಟ್ಟಿದ್ದ. ನನ್ನ ಮುಖ್ಯವಿಚಾರಣೆಯ 3 ನೇ ಪ್ಯಾರದಲ್ಲಿ ಹೇಳಿದಂತೆ ಅಂದರೆ "ಸುಮಾರು ಮೂರು ವರ್ಷದ ಮೊದಲು ಚಾಸಾ-1 ರವರಿಗೆ ಆರೋಗ್ಯ ಚೆನ್ನಾಗಿ ಇಲ್ಲದ ಕಾರಣ ನಾನು ಹಾಗೂ ನನ್ನ ಹೆಂಡತಿ ಶನಿವಾರಸಂತೆಯ ಹೋಟೆಲ್ ಗೆ ಹೋದೆವು ಮತ್ತು ಬೆಳಿಗ್ಗೆ 7.30 ಗಂಟೆಗೆ ನಾವು ವಾಪಸ್ಸಾದಾಗ ಆರೋಪಿಗಳು ಮನೆಯ ಒಳಗಡೆ ಇದ್ದು, ಬೆಂಕಿ ಉರಿಸಿ ಅಡುಗೆ ಮಾಡುತಿದ್ದರು. ಆರೋಪಿಗಳನ್ನು ವಿಚಾರಿಸಿದಾಗ ಆರೋಪಿಗಳು ಅದು ಅವರ ಮನೆ ಎಂದು ಹೇಳಿ ಜೋರು ಮಾಡಿದ್ದರು. ಆರೋಪಿ ಬಸವರಾಜು, ಶಶಾಂಕ್ ಬಂದು ಸದರಿ ಮನೆ ಆರೋಪಿಗಳದ್ದು ಎಂದು ನಮಗೆ ಜೋರು ಮಾಡಿದ್ದರು" ಎಂದು ನಾನು ತನಿಖಾಧಿಕಾರಿಯ ಮುಂದೆ ನೀಡಿರುವ ಹೇಳಿಕೆಯಲ್ಲಿ ಹೇಳಿದ್ದೇನೆ. ಈ ಮೇಲಿನ ವಿಷಯವನ್ನು ನಾನು ತನಿಖಾಧಿಕಾರಿಯ ಮುಂದೆ ಹೇಳಿದ ಪ್ರಥಮ ಬಾರಿಗೆ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರ ಶ್ರೀ ಡಿ.ಡಿ.ಸಿ ವಕೀಲರಿಂದಃ**

8. ನನ್ನ ಮಗ ಲೋಕೇಶನಿಗೆ ನಾಕಲಗೂಡು ಗ್ರಾಮದಲ್ಲಿ ಪ್ರತ್ಯೇಕ ಮನೆ ಇರುತ್ತದೆ. ಸದರಿ ಮನೆ ಅಲ್ಲದೆ ನನ್ನ ಹೆಸರಲ್ಲಿ ಬೇರೆ ಮನೆ ಇರುತ್ತದೆ ಎಂದರೆ ಸರಿ. ನನ್ನ ಮನೆ ಮತ್ತು ನನ್ನ ಮಗನ ಮನೆ ಪೈಸಾರಿ ಜಾಗದಲ್ಲಿ ಇರುತ್ತದೆ. ನಾಕಲಗೂಡು ಗ್ರಾಮದಿಂದ ಶನಿವಾರಸಂತೆಗೆ ಮೂರು ಕಿಲೋಮೀಟರ್ ದೂರ ಇರುತ್ತದೆ. ಘಟನಾ ದಿನಾಂಕ ನಾನು ಮತ್ತು ನನ್ನ ಹೆಂಡತಿ ಆಟೋ ರಿಕ್ಷಾದಲ್ಲಿ ಆಸ್ಪತ್ರೆಗೆ ಹೋಗಿದ್ದೆವು. ಆಸ್ಪತ್ರೆಯಿಂದ ನಾವು ಶನಿವಾರಸಂತೆಯಲ್ಲಿ ಇರುವ ನನ್ನ ತಮ್ಮ ಕುಮಾರನ ಮನೆಗೆ ಹೋಗಿದ್ದೆವು. ಘಟನಾ ದಿನಾಂಕ ಶನಿವಾರಸಂತೆಯಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನನ್ನ ಪತ್ನಿಗೆ ಚಿಕಿತ್ಸೆ ನೀಡಲಾಗಿತ್ತು. ಆ ರೀತಿ ಆಕೆ ಚಿಕಿತ್ಸೆ ಪಡೆದಾಗ ಸಂಜೆ 4.00 ಗಂಟೆ ಆಗಿತ್ತು. ಸದರಿ ದಿನ ನಾವು ಹೋಟೆಲ್ ಗೆ ಹೋಗಿ ನಂತರ ನನ್ನ ತಮ್ಮನ ಮನೆಗೆ

ಹೋಗಿ, ಅಲ್ಲಿಯೇ ಉಳಿದು ಸಂಜೆ 4.00 ಗಂಟೆಗೆ ಆಸ್ಪತ್ರೆಯಲ್ಲಿ ನನ್ನ ಪತ್ನಿಗೆ ಚಿಕಿತ್ಸೆ ಕೊಡಿಸಿದ ನಂತರ ಸದರಿ ದಿನ ರಾತ್ರಿ ನಾನು ಮತ್ತು ಪತ್ನಿ ನನ್ನ ತಮ್ಮನ ಮನೆಯಲ್ಲಿ ಉಳಿದಿದ್ದು, ಮಾರನೇ ದಿನ ನಾವು ನಾಕಲಗೂಡು ಗ್ರಾಮಕ್ಕೆ ವಾಪಸ್ಸು ಬಂದಿದ್ದೆವು.

9. ಚಾಸಾ-1 ರವರನ್ನು ಆಸ್ಪತ್ರೆಗೆ ಪ್ರಾಸಾ-6 ರವರು ಕರೆದುಕೊಂಡು ಹೋಗಿದ್ದರು. ಸದರಿ ವಿಚಾರವನ್ನು ನಾನು ಆ ಕೂಡಲೇ ನನ್ನ ಮಗನಿಗೆ ತಿಳಿಸಿರಲಿಲ್ಲ. ಘಟನೆ ನಡೆದ ದಿನ ಬೆಳಿಗ್ಗೆ 9.00 ಗಂಟೆಗೆ ನನ್ನ ಮಗ ಮನೆಗೆ ಬಂದಿದ್ದ. ನನ್ನ ಹೆಂಡತಿ ವೇದಾವತಿ (ಚಾಸಾ-1) ಯನ್ನು ಪ್ರಾಸಾ-1 ರವರು ಘಟನಾ ದಿನಾಂಕ ಬೆಳಿಗ್ಗೆ 10.00 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದರು. ಘಟನೆಯ ಹಿನ್ನಲೆಯನ್ನು ವೈದ್ಯಾಧಿಕಾರಿಗೆ ಚಾಸಾ-1 ಅಥವಾ ಪ್ರಾಸಾ-1 ರವರು ಹೇಳಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮಗ (ಪ್ರಾಸಾ-5) ರವರು ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಪ್ರಯತ್ನ ಮಾಡಿರಲಿಲ್ಲ. ಚಾಸಾ-1 ರವರು ಚಿಕಿತ್ಸೆ ಪಡೆದ ಕುರಿತಾಗಿ ಆಸ್ಪತ್ರೆಯ ದಾಖಲೆಯನ್ನು ನಾನು ನೋಡಿರುವುದಿಲ್ಲ.

10. ದಿನಾಂಕ 18-07-2022 ರಿಂದ 22-07-2022 ರ ತನಕ ಚಾಸಾ-1 ರವರು ಆಸ್ಪತ್ರೆಗೆ ಹೋದದ್ದನ್ನು ಹೊರತುಪಡಿಸಿ ಬೇರೆ ಎಲ್ಲಿಗೂ ಹೋಗಿರಲಿಲ್ಲ. ದಿನಾಂಕ 22-07-2022 ರಂದು ಚಾಸಾ-1 ರವರನ್ನು ಕರೆದುಕೊಂಡು ನಾನು ಶನಿವಾರಸಂತೆ ಪೊಲೀಸ್ ಠಾಣೆಗೆ ಹೋಗಿದ್ದೆ. ದೂರನ್ನು ಯಾರು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ದೂರಿನಲ್ಲಿ ನಮೂದಿಸಿದ್ದ ವಿಷಯವನ್ನು ನಾನು ಓದಿ ನೋಡಿರುವುದಿಲ್ಲ. ನನ್ನ ಹೇಳಿಕೆಯನ್ನು ಘಟನೆ ನಡೆದ ಎರಡು ದಿನಗಳ ನಂತರ ತನಿಖಾಧಿಕಾರಿ ಪೊಲೀಸ್ ಠಾಣೆಯಲ್ಲಿ ಪಡೆದಿದ್ದರು. ಸದರಿ ಹೇಳಿಕೆಯಲ್ಲಿ

ನಮೂದಿಸಿದ್ದ ವಿಷಯವನ್ನು ನಾನು ತಿಳಿದುಕೊಂಡಿರುವುದಿಲ್ಲ. ನಾನು ಮತ್ತು ನನ್ನ ಮಗ ಪ್ರಾಸಾ-5 ಲೋಕೇಶ್ ಮೊದಲೇ ಸರ್ಕಾರಿ ಜಾಗದಲ್ಲಿ ಮನೆಯನ್ನು ಹೊಂದಿದ್ದು, ಮತ್ತೊಂದು ಮನೆಯನ್ನು ಅತೀಕ್ರಮಿಸಲು ಪ್ರಯತ್ನ ಪಡುತಿದ್ದ ಕಾರಣ ಈ ಪ್ರಕರಣ ಆರೋಪಿತರು ಅದರ ವಿರುದ್ದ ತಹಶೀಲ್ದಾರ್ ರವರಿಗೆ ದೂರನ್ನು ನೀಡಿದ್ದು, ಆ ದ್ವೇಷದಿಂದಾಗಿ ಆರೋಪಿತರ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ್ದ ಮುದ್ದೆಮಾಲುಗಳನ್ನು ಮತ್ತು ದಾಖಲೆಗಳನ್ನು ಪೊಲೀಸರು ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಘಟನೆ ನಡೆಯದೆ ಇದ್ದರೂ ಕೂಡ ಈ ಮೇಲೆ ಹೇಳಿದ ಕಾರಣದಿಂದಾಗಿ ಆರೋಪಿಗಳ ವಿರುದ್ದ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಜೇಬಿನಿಂದ ಕಿತ್ತುಕೊಳ್ಳಲಾಗಿದೆ ಎನ್ನಲಾದ ರೂ.25,000/- ಹಣದ ಮುಖಬೆಲೆ ಮತ್ತು ಅವುಗಳ ಸೀರಿಯಲ್ ನಂಬರ್ ನ್ನು ನನಗೆ ಹೇಳಲು ಆಗುವುದಿಲ್ಲ. ಈ ಕೇಸಿಗೆ ಬೇಕಾಗಿ ನನ್ನ ಜೇಬಿನಿಂದ ರೂಪಾಯಿ 25,000/- ಹಣವನ್ನು ಆರೋಪಿತರು ಕಿತ್ತುಕೊಂಡಿದ್ದಾರೆ ಎಂದು ಸುಳ್ಳು ಕತೆಯನ್ನು ನಾನು ಮತ್ತು ನನ್ನ ಮನೆಯವರು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಪೊಲೀಸರು ಯಾವುದೆಲ್ಲಾ ದಾಖಲೆಗೆ ನನ್ನ ಮತ್ತು ಚಾಸಾ-1 ರವರ ಎಡಗೈ ಹೆಬ್ಬೆಟ್ಟು ಗುರುತುಗಳನ್ನು ಪಡೆದುಕೊಂಡಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ಕೇಳಿದ್ದಕ್ಕೆ ನಾವು ಸದರಿ ಹೆಬೆಟ್ಟು ಗುರುತುಗಳನ್ನು ಮಾಡಿದ್ದೆವು.

**ಪಾಟೀಸವಾಲು- 5 ನೇ ಆರೋಪಿತರ ಪರ ಶ್ರೀ ಪಿ.ಕೆ.ಎಂ. ವಕೀಲರು ಈ ಮೇಲಿನ ಪಾಟೀಸವಾಲುಗಳನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ